ವಿ ರೈತ ಮಿತ್ರ



■ಸೋಯಾ ಅವರೆಯಲ್ಲಿ ಎಲೆ ಮಡಚುವ ಹುಳ ಹೆಚ್ಚಾಗಿದ್ದು, ಇದರ ನಿರ್ವಹಣೆ ಹೇಗೆ?

| ಅಮೃತಾ ಹಾವೇರಿ

ಸೋಯಾ ಅವರೆ ಮುಖ್ಯವಾದ ಎಣ್ಣೆಕಾಳು ಹಾಗೂ ದ್ವಿದಳ ಧಾನ್ಯದ ಬೆಳೆಯಾಗಿದ್ದು, ಇದನ್ನು ತರಕಾರಿ ಬೆಳೆಯಾಗಿಯೂ ಉಪಯೋಗಿಸಬಹುದು. ಇದರ ಬೇರುಗಳಲ್ಲಿ ವಾತಾವರಣದಲ್ಲಿರುವ ಸಾರಜನಕ ಸ್ಥಿರೀಕರಿಸುವ ಗಂಟುಗಳಿರುವುದರಿಂದ ಇದು ಮಿಶ್ರ ಬೆಳೆಗೆ ಅಥವಾ ಬೆಳೆ ಪರಿವರ್ತನೆಗೆ ಸೂಕ್ತವಾದ ಬೆಳೆ. ಸೋಯಾ ಅವರೆ ಸಸ್ಯ ಆಧಾರಿತ ಪ್ರೋಟೀನ್‌ನ ಅತ್ಯುತ್ತಮ ಮೂಲಗಳಲ್ಲಿ ಒಂದಾಗಿದೆ. ಸೋಯಾದಲ್ಲಿ ಎಲೆ ಮಡಚುವ ಮರಿಹುಳುಗಳು ಎಲೆಗಳನ್ನು ಮಡಿಕೆ ಆಕಾರದಲ್ಲಿ ಮಡಚಿ ಒಳ ಸೇರಿ ಹಸಿರು ಭಾಗವನ್ನು ಕೆರೆದು ತಿನ್ನುವುದರಿಂದ ಬಿಳಿ ಮಚ್ಚೆಗಳು ಮೂಡುತ್ತವೆ ಹಾಗೂ ಈ ಮಡಿಕೆಗಳಲ್ಲಿ ಹುಳುವಿನ ಹಿಕ್ಕೆ ಕಾಣಬಹುದು. ಇದರಿಂದ ಕ್ರಮೇಣ ಎಲೆಗಳು ಒಣಗಿ ಗಿಡದ ಬೆಳವಣಿಗೆ ಕುಂಠಿತಗೊಳ್ಳುತ್ತದೆ.

ನಿರ್ವಹಣೆ: ಮಡಚಿದ ಎಲೆಗಳನ್ನು ಕಿತ್ತು ನಾಶಪಡಿಸುವುದು. ನಂತರ ಪ್ರತಿ ಲೀಟರ್ ನೀರಿಗೆ ಕ್ಲೋರೋಪೈರಿಫಾಸ್ 20 ಇ.ಸಿ 2.0 ಮಿ.ಲೀ.ನಂತೆ ಬೆರೆಸಿ ಸಿಂಪಡಿಸುವುದು.

| ಡಾ. ಕೆ.ಪಲ್ಲವಿ ಸಸ್ಯ ಸಂರಕ್ಷಣಾ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571 / 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

Vijayavani pg 09

ಅರ್ಜಿ ಆಹ್ವಾನ

V-karnataka add pg 02

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯು ಹದಿನಾಲ್ಕು ವಾರಗಳ ಬೇಕರಿ ಟೆಕ್ನಾಲಜಿ ಸರ್ಟಿಫಿಕೇಟ್ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದೆ. ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣ ಹಾಗೂ ಅನುತ್ತೀರ್ಣರಾದವರು 10 ರೂ. ಪಾವತಿಸಿ ಅರ್ಜಿ ನಮೂನೆಗಳನ್ನು ಸಂಯೋಜಕರು ಮತ್ತು ಮುಖ್ಯಸ್ಥರು, ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆ, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು-65 ಇವರಿಂದ ಪಡೆಯ ಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಮಾರ್ಚ್ 29 ರೊಳಗೆ ತಲುಪಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ: 080-23513370 ಸಂಪರ್ಕಿಸಬಹುದು.

Viswavani pg 03

990 ಕ್ಲಸ್ಟರ್‌ಗಳಲ್ಲಿ ಪ್ರಾಯೋಗಿಕ ನೈಸರ್ಗಿಕ ಕೃಷಿ

ಬೆಂಗಳೂರು: ರಾಷ್ಟ್ರೀಯ ನೈಸರ್ಗಿಕ ಕೃಷಿ ಯೋಜನೆಯಲ್ಲಿ ಈ ವರ್ಷ ರಾಜ್ಯದ ಎಲ್ಲಾ ಜಿಲ್ಲೆಗಳ ಒಟ್ಟಾರೆ 990 ಕ್ಲಸ್ಟರ್‌ಗಳಲ್ಲಿ ಪ್ರಾಯೋಗಿಕ ನೈಸರ್ಗಿಕ ಕೃಷಿ ಪ್ರಾತ್ಯಕ್ಷಿಕೆ ನಡೆಸಲಾಗುವುದು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ.

ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಡಾ.ಸುಭಾಷ್ ಪಾಳ್ಕರ್ ನೈಸರ್ಗಿಕ ಕೃಷಿ ಮಾದರಿಯ ಸಾಧಕ ಬಾಧಕಗಳ ಕುರಿತು ಸಹಜ ಕೃಷಿ ಜಾಗೃತಿ ರೈತ ಪ್ರಮುಖರು ಮತ್ತು ಕೃಷಿ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಮಾತನಾಡಿ, ನೈಸರ್ಗಿಕ ಕೃಷಿ ದೃಢೀಕರಣದ ವ್ಯವಸ್ಥೆ ಕೂಡ ಜಾರಿ ಮಾಡಲಾಗುವುದು ರೈತರ ಉತ್ಪನ್ನಗಳ ಮೌಲ್ಯವರ್ಧನೆಗೆ ಅಗತ್ಯ ವಿರುವ ಎಲ್ಲಾ ಪೂರಕ ನೆರವು ಒದಗಿಸಲು ಹೊಸ ಹೊಸ ಯೋಜನೆ ಜಾರಿಗೆ ತರಲಾಗುತ್ತಿದೆ ಎಂದರು.

ರೈತರ ಅಭ್ಯುದಯ ಹಾಗೂ ಪ್ರಕೃತಿಗೆ ವರವಾಗುವ ನೈಸರ್ಗಿಕ ಕೃಷಿ ಪ್ರೋತ್ಸಾಹಿಸಲು ಹಾಗೆಯೇ ಮಣ್ಣಿನ ಫಲವತ್ತತೆ ಉಳಿಯಬೇಕೆಂದು ಸಾವಯವ ಕೃಷಿ



ಸಹಜ ಕೃಷಿ ಜಾಗೃತಿ ರೈತ ಪ್ರಮುಖರು ಮತ್ತು ಕೃಷಿ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ವಿಕಾಸ ಸೌಧದ ತಮ್ಮ ಕಚೇರಿಯಲ್ಲಿ ಸಚಿವ ಎನ್. ಚಲುವರಾಯಸ್ವಾಮಿ ಸಭೆ ನಡೆಸಿದರು.

ಪ್ರೋತ್ಸಾಹಕ್ಕೆ ಸರಕಾರ ಆದ್ಯತೆ ನೀಡುತ್ತಿದೆ. ಅದೇ ರೀತಿ ಮಳೆಯಾಶ್ರಿತ ಪ್ರದೇಶಗಳಲ್ಲಿ ಸಹಜ ಕೃಷಿ ಪದ್ಧತಿ ಪ್ರೋತ್ಸಾಹಿಸುವುದರ ಮೂಲಕ ರಾಸಾಯನಿಕ ಮುಕ್ತ ವ್ಯವಸಾಯಕ್ಕೂ ಆದ್ಯತೆ ನೀಡಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಮಾಜಿ ಶಾಸಕ ಡಿ.ಆರ್.ಪಾಟೀಲ್, ಸಹಜ ಕೃಷಿ ಪರಿಣಿತ ಪಿ.ಎನ್.ನಾಗರಾಜ್, ಜೆ.ಎಸ್ .ನಾಡಗೌಡ, ರಾಜಶೇಖರ ನಿಂಬರಗಿ ನಾಗೇಂದ್ರ, ಪ್ರಸನ್ನ ಮೂರ್ತಿ ಸುಧಾಕರ್, ಕೃಷಿ ಇಲಾಖೆ ಕಾರ್ಯದರ್ಶಿ ಡಾ.ರವಿಶಂಕರ್, ಆಹಾರ ಸಂಸ್ಕರಣೆ ಮತ್ತು ಕಟಾವು ತಂತ್ರಜ್ಞಾನ ವಿಶೇಷ ಕಾರ್ಯದರ್ಶಿ ರೋಹಿಣಿ ಸಿಂಧೂರಿ, ಕೃಷಿ ಆಯುಕ್ತ ವೈ.ಎಸ್.ಪಾಟೀಲ್, ನಿರ್ದೇಶಕ ಡಾ.ಪುತ್ರ ಉಪಸ್ಥಿತರಿದ್ದರು.

● ಕೃಷಿ ಇಲಾಖೆ ಪತಿಯಿಂದ ವಿಶ್ವವಿದ್ಯಾನಿಲಗಳ ಮೂಲಕ ಹೊಸ ಹೊಸ ಸಂಶೋಧನೆ ಮಾಡಿ ರೈತರಿಗೆ ಪರಿಚಯಿಸುವ ಕಾರ್ಯ ನಿರಂತರವಾಗಿ ಮಾಡಲಾಗುತ್ತಿದೆ ಹಾಗೂ ಯಾಂತ್ರೀಕರಣದ ಮೂಲಕ ಶ್ರಮ ತಗ್ಗಿಸಿ ಆದಾಯ ಹೆಚ್ಚಿಸುವ ಕೆಲಸವನ್ನು ಮಾಡಲಾಗುತ್ತಿದೆ.

-ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

ಕ್ಯಾನ್ಸರ್‌ಗೆ ಕಾರಣವಾಗುವ ವಸ್ತುಗಳ ನಿರ್ಬಂಧಕ್ಕೆ ಸೂಚನೆ | ಮಾರುಕಟ್ಟೆ ಮೇಲೆ ಪರಿಣಾಮ ಆತಂಕ

ಮತ್ತೆ ಅಡಕೆ ಸೇವನೆ ನಿಯಂತ್ರಣ ವಿಚಾರವೆತ್ತಿದ ಡಬ್ಲ್ಯುಎಚ್‌ಒ

■ ವಿಜಯವಾಣಿ ಸುದ್ದಿಜಾಲ ಪುತ್ತೂರು (ದ.ಕ.)

ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಆಗ್ನೇಯ ಏಷ್ಯಾ ಪ್ರದೇಶದಲ್ಲಿ ವಿಶ್ವ ಬಾಯಿ ಆರೋಗ್ಯ ದಿನದ ಅಂಗವಾಗಿ 'ಎ ಹ್ಯಾಪಿ ಮೌತ್ ಈಸ್ ಎ ಹ್ಯಾಪಿ ಮೈಂಡ್' ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಕ್ಯಾನ್ಸರ್ ವಿಷಯದಲ್ಲಿ ಹೊಗೆರಹಿತ ತಂಬಾಕು ಹಾಗೂ ಅಡಕೆ ಸೇವನೆಯ ವಿಚಾರವನ್ನು ಪ್ರಸ್ತಾಪಿಸಿದೆ. ಕ್ಯಾನ್ಸರ್ ಪ್ರಮಾಣ ಕಡಿಮೆ ಮಾಡಲು ಸದಸ್ಯ ರಾಷ್ಟ್ರಗಳು ತಾಂತ್ರಿಕ ಬೆಂಬಲ ನೀಡಬೇಕು ಎಂದು ಅಭಿಪ್ರಾಯವ್ಯಕ್ತಪಡಿಸಿದೆ. ಅಡಕೆಯ ಮೇಲೆ ನಿಯಂತ್ರಣ ಹೇರುವ ಡಬ್ಲ್ಯುಎಚ್‌ಒ ಅಂಶಗಳು, ಬೆಳೆಗಾರರನ್ನು ಕಾಡತೊಡಗಿದೆ.

ಸುಮಾರು 900 ಮಿಲಿಯನ್ ಬಾಯಿಯ ಕಾಯಿಲೆಗಳು ಏಷ್ಯಾ ಭಾಗದಲ್ಲಿ ಕಾಣಿಸಿಕೊಂಡಿದೆ. ವಿಶ್ವದ ಅತಿ ಹೆಚ್ಚು ಪ್ರಕರಣಗಳು ಇವು. ಪುರುಷರಲ್ಲಿ ಕ್ಯಾನ್ಸರ್ ಪ್ರಮುಖ. ಬಾಯಿ ಆರೋಗ್ಯ ಪ್ರಕರಣಗಳಲ್ಲಿ ಕ್ಯಾನ್ಸರ್ ಪ್ರಮಾಣ ಶೇ.11.2 ಇದೆ ಎಂದು ವರದಿ ಹೇಳಿದೆ. ಆಗ್ನೇಯ ಏಷ್ಯಾದಲ್ಲಿ ಬಾಯಿಯ ಕ್ಯಾನ್ಸರ್‌ಗೆ ಹೊಗೆರಹಿತ ತಂಬಾಕು ಅಥವಾ ಅಡಕೆ ಕಾರಣವಾಗುತ್ತಿದ್ದು, ಒಂದು ಈ ವಸ್ತುಗಳ ಸೇವನೆಯಿಂದಲೇ ಎಂದು ಹೇಳಿಕೊಂಡಿದೆ. ಜನರಲ್ಲಿ ಹೊಗೆರಹಿತ ತಂಬಾಕು



ಅಥವಾ ಅಡಕೆ ಸೇವನೆ ತಡೆಗಟ್ಟಿದರೆ ಪ್ರಕರಣಗಳನ್ನು ತಡೆಯಬಹುದು ಎನ್ನುವುದನ್ನು ಮತ್ತೆ ಉಲ್ಲೇಖಿಸಲಾಗಿದೆ.

ಹೊಗೆರಹಿತ ತಂಬಾಕು ಮತ್ತು ಅಡಕೆ ಸೇವನೆಯಿಂದ ಉಂಟಾಗುವ ಬಾಯಿಯ ಕ್ಯಾನ್ಸರ್ ಪರಿಹರಿಸಲು ತಾಂತ್ರಿಕ ಬೆಂಬಲಕ್ಕಾಗಿ ಸದಸ್ಯ ರಾಷ್ಟ್ರಗಳಿಗೆ ಮನವಿ ಮಾಡಿದೆ. ಏಷ್ಯಾಕ್ಕೆ ಪ್ರಾದೇಶಿಕ ಮಾರ್ಗಸೂಚಿ ರೂಪಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ಮಾರ್ಗದರ್ಶನ ನೀಡುವ ಉದ್ದೇಶವಿದೆ ಎಂದು ಡಬ್ಲ್ಯುಎಚ್‌ಒ ಹೇಳಿಕೊಂಡಿದೆ. 2030ರ ವೇಳೆಗೆ ನೀತಿ ನಿರೂಪಣೆ ಮಾಡಿ ಬಾಯಿಯ ಆರೋಗ್ಯದ ಪ್ರಗತಿ ಕಾಣಬೇಕು. ಈ ಕಾರ್ಯ ವೇಗಗೊಳಿಸುವಲ್ಲಿ ಮಾರ್ಗದರ್ಶನಗಳನ್ನು ಬಳಸಿಕೊಳ್ಳುವಂತೆ ಎಲ್ಲ ದೇಶಗಳನ್ನು ಒತ್ತಾಯಿಸಿದೆ.

ಅಡಕೆ ರಾಜ್ಯದ ಪ್ರಮುಖ ಬೆಳೆ: ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಅಸ್ಸಾಂ, ಮೇಘಾಲಯ, ಮಿಜೋರಾಂ, ತ್ರಿಪುರಾ ಸೇರಿ 10 ರಾಜ್ಯಗಳಲ್ಲಿ ಅಡಕೆ ಬೆಳೆ ಇದೆ. ದೇಶದಲ್ಲಿ 9.4 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 14.11 ಲಕ್ಷ ಟನ್ ಅಡಕೆ ಉತ್ಪಾದನೆ ಆಗುತ್ತಿದೆ. ರಾಜ್ಯದಲ್ಲಿ 6.8 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 10 ಲಕ್ಷ ಟನ್ ಅಡಕೆ ಬೆಳೆಯುತ್ತಿದ್ದು, ಆರೋಗ್ಯ ಸಂಸ್ಥೆ ಹೊರಡಿಸುತ್ತಿರುವ ವರದಿ ಬೆಳೆಗಾರರ ಪಾಲಿಗೆ ತಲೆನೋವಾಗಲಿದೆ. ಅಡಕೆಯಲ್ಲಿ ಅರೆಕೋಲಿನ್ ಅಂಶ ಹಾನಿಕಾರಕ ಎಂದು ಹೇಳಲಾಗುತ್ತದೆ. ಆದರೆ ಇದರ ಅತಿಯಾದ ಸೇವನೆಯಷ್ಟೇ ಅಪಾಯಕಾರಿ ಎಂಬ ವರದಿಗಳಿವೆ. ಅಡಕೆಯಲ್ಲಿರುವ ಈ ಹಾನಿಕಾರ ಅಂಶವನ್ನು ಔಷಧ ತಯಾರಿಯಲ್ಲಿಯೂ ಬಳಕೆ ಮಾಡಲಾಗುತ್ತದೆ. ಅರೆಕೋಲಿನ್ ಬಗ್ಗೆ ಸಾಕಷ್ಟು ಅಧ್ಯಯನ ನಡೆಯುತ್ತಿದೆ. ಒಂದು ಅಧ್ಯಯನದ ಪ್ರಕಾರ, ಅಡಕೆಯಿಂದ ಅರೆಕೋಲಿನ್ ಪಡೆಯುವ ಬಗ್ಗೆಯೂ ಚಿಂತನೆ ನಡೆದಿತ್ತು. ಹೀಗಾಗಿ ಅಡಕೆಯ ಪರ್ಯಾಯ ಬಳಕೆಯೂ ಸಾಧ್ಯವಿದೆ. ಸಿಪಿಸಿಆರ್ ಐಯಂತಹ ಸಂಶೋಧನಾ ಸಂಸ್ಥೆಗಳು ಅರೆಕೋಲಿನ್ ಬಳಕೆ ಹಾಗೂ ಅದರ ಪರಿಣಾಮಗಳ ಬಗ್ಗೆ ವರದಿ ನೀಡಬೇಕು ಎಂಬುದು ಕೃಷಿಕರ ನಿರೀಕ್ಷೆ.

ಮಾರುಕಟ್ಟೆಯಲ್ಲಿ ಊಹಾಪೋಹ

ಅಡಕೆ ಬ್ಯಾನ್, ಹಾನಿಕಾರಕ ಎಂಬ ವರದಿಗಳು ಬರುತ್ತಿದ್ದಂತೆ ಅಡಕೆ ಮಾರುಕಟ್ಟೆಯ ಮೇಲೆ ನೇರ ಪರಿಣಾಮ ಆಗುತ್ತದೆ. ಅಡಕೆ ಮಾರುಕಟ್ಟೆಯಲ್ಲಿ ಊಹಾಪೋಹಗಳು ಬರುತ್ತಿದ್ದಂತೆ, ನೇರವಾಗಿ ಧಾರಣೆಗೆ ಹೊಡೆತ ಬೀಳುತ್ತದೆ. ಅಡಕೆಯನ್ನು ಮುಂದಿರಿಸಿಕೊಂಡು ದೇಶದ ಆರ್ಥಿಕ ಪರಿಸ್ಥಿತಿ ಹಾಗೂ ಅಡಿಕೆ ಬೆಳೆಗಾರರ, ಕೃಷಿಕರನ್ನು ಅಸ್ಥಿರ ಮಾಡುವ ಪ್ರಯತ್ನವೊಂದು ನಡೆಯುತ್ತಿದೆ ಎಂಬ ಆರೋಪಗಳೂ ಕೇಳಿಬರುತ್ತಿವೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಡಕೆ ಬಗ್ಗೆ ಋಣಾತ್ಮಕ ಅಂಶವನ್ನು ಪದೇಪದೆ ಬಿತ್ತುವುದು ಸರಿಯಲ್ಲ. ಸರ್ಕಾರಗಳು ಅಡಕೆಯಲ್ಲಿನ ಉತ್ತಮ ಅಂಶಗಳ ಬಗ್ಗೆ ಸಂಶೋಧನೆ ನಡೆಯುತ್ತಿರುವುದನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯಬೇಕು. 10 ರಾಜ್ಯಗಳಲ್ಲಿ ಅಡಕೆ ಬೆಳೆಯಲಾಗುತ್ತಿದೆ. ಬೆಳೆಗಾರರ ಹಿತದೃಷ್ಟಿಯಿಂದ ಅಡಕೆ ಹಾಗೂ ಕೃಷಿಕರ ಆರ್ಥಿಕತೆಗೆ ಪರಿಣಾಮ ಬೀರದಂತೆ ಎಚ್ಚರ ವಹಿಸಬೇಕಿದೆ.

| ಮಹೇಶ್ ಪುಚ್ಚಪ್ಪಾಡಿ
ಅಧ್ಯಕ್ಷರು, ಅಖಿಲ ಭಾರತ ಅಡಕೆ ಬೆಳೆಗಾರರ ಸಂಘ

Vijayavani pg 09

ICAR–National Institute of Veterinary Epidemiology and Disease Informatics
Ramagondanahalli, Yelahanka, Bengaluru-560 119

F. No.12-32/NIVEDI/Estt/Rectt/2024-25 (e 310427) Date:25-03-2025

NOTIFICATION

Walk in interview for filling up of various temporary positions under time bound Ad-hoc projects/schemes at ICAR-NIVEDI, Ramagondanahalli, Yelahanka, Bengaluru- 560119 will be held on **03-04-2025** and **04-04-2025**. All desirous and eligible candidates fulfilling criteria are invited to attend the walk-in interview. For educational qualifications, experience and other related information, please visit the institute website **www.nivedi.res.in.**

Sd/-, Director

Times of Ind pg 12

For more information visit
University Library Website
Web - uasbagrilibindia.org
E-mail- librarian@uasbangalore.edu.in

ಸಸ್ಯತಳಿ ಸಂರಕ್ಷಣೆ– ರೈತರ ಹಕ್ಕು ಕಾಯ್ದೆ ಕುರಿತು ತರಬೇತಿ–ವಸ್ತುಪ್ರದರ್ಶನ

ಕೃಷಿ ಉತ್ಪನ್ನ ಮಾರಾಟಕ್ಕೆ ಸೂಕ್ತ ನೆಲೆ ಕಲ್ಪಿಸಿ

•ಕೊಡ್ಲುಳ್ಳಾಪುರ: ಗುಣಮಟ್ಟದ ಸಸ್ಯ ಸಂಪತ್ತನ್ನು ಸಂರಕ್ಷಿಸಬೇಕಾಗಿದೆ. ಸಸ್ಯ ತಳಿಗಳ ಸಂರಕ್ಷಣೆ ಬಗ್ಗೆ ನಮ್ಮ ರೈತರಿಗೆ ಅರಿವಿರಬೇಕು ಎಂದು ಬೆಂಗಳೂರಿನ ಕೃಷಿ ವಿವಿ ನಿವೃತ್ತ ಪ್ರಾಧ್ಯಾಪಕರು ಡಾ.ನಿರಂಜನಮರ್ತಿ ಹೇಳಿದರು.

ತಾಲೂಕಿನ ಹಾಡೋನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿದ್ದ ಸಸ್ಯತಳಿಗಳ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆ ತರಬೇತಿ ಮತ್ತು ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿ, ರೈತರು ನಮ್ಮ ಕಾನೂನು ಕಾಯ್ದೆ ಯೋಜನೆ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದುಕೊಂಡಿರಬೇಕು. ಇದರಿಂದ ಸರ್ಕಾರದಿಂದ ಆಯಾ ಕಾಲದಲ್ಲಿ ಸಿಗುವ ಸೌಲಭ್ಯವನ್ನು ಪಡೆದುಕೊಳ್ಳಬೇಕು ಎಂದರು. ಒಂದೇ ಭಾರತ್ ಫೌಂಡೇಶನ್ ಸಂಸ್ಥೆಯ ಅಧ್ಯಕ್ಷ ಬಿಜವಾರ ಎಚ್.ಲೋಕೇಶ್ ಮಾತನಾಡಿ, ರೈತರು ಕೇವಲ ಬೆಳೆಯನ್ನು ಬೆಳೆಯುವುದು ಅಷ್ಟೇ ಅಲ್ಲದೆ ಅದನ್ನು ಮಾರಾಟ ಮಾಡುವ ಕೆಲಸ ಮಾಡಬೇಕಾಗಿದೆ. ಅದಕ್ಕೆ ಬೇಕಾದ ಸೂಕ್ತ ಸಲಹೆ ಮಾಹಿತಿ ಪಡೆದುಕೊಂಡು ತಾವು ಲಾಭದಾಯಕವಾಗಿ ಮಾರಾಟ ಮಾಡಬೇಕೆಂದು ಹೇಳಿದರು.ಮೈಸೂರಿನ ಸಹಜ ಸಮೃದ್ಧ ಸಂಸ್ಥೆಯ ಯೋಜನಾ ಸಂಯೋಜಕ ವಿಶ್ವನಾಥ ಮಾತನಾಡಿ, ಮನುಷ್ಯನ ಆರೋಗ್ಯ ನಿರ್ವಹಣೆಯಲ್ಲಿ ಸ್ಥಳೀಯ ತಳಿಗಳ ಕೊಡುಗೆ ಹಾಗೂ ಸಹಜ ಸಮೃದ್ಧಿ ಸಂಸ್ಥೆ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು.

ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥ ಡಾ.ಬಿ.ಜಿ.ಹನುಮಂತರಾಯ ಮಾತನಾಡಿ, ದರು. ರಾಮನಗರ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥೆ ಡಾ. ಲತಾ ಕುಲಕರ್ಣಿ, ಕೇಂದ್ರದ ವಿಜ್ಞಾನಿಗಳಾದ ಡಾ. ಜೆ.ವೆಂಕಟೇಗೌಡ, ಡಾ. ಪಿ. ವೀರಣಾಗಪ್ಪ ಡಾ.ವೈ.ಎಂ. ಗೋಪಾಲ್, ಎಸ್ .ವಿ. ಮೇಘನಾ ಸೇರಿದಂತೆ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಮತ್ತು ರಾಮನಗರ ಜಿಲ್ಲೆಯಿಂದ ರೈತರು ಮತ್ತು ರೈತ ಮಹಿಳೆಯರು ಭಾಗವಹಿಸಿದ್ದರು.



13 ರೀತಿಯ ಸಂರಕ್ಷಿತ ತಳಿ ಪ್ರದರ್ಶನ

ಮೈತ್ರಿ ಸೇವಾ ಸಂಸ್ಥೆಯಿಂದ 13 ರೀತಿಯ ಸಂರಕ್ಷಿತ ತಳಿಯನ್ನು ಪ್ರದರ್ಶಿಸಿದ್ದರು. ಮೈಸೂರಿನ ಸಹಜ ಸಮೃದ್ಧ ಸಂಸ್ಥೆಯಿಂದ ಹತ್ತು ರೀತಿಯ ಭತ್ತದ ತಳಿಗಳು, 30 ವೈವಿಧ್ಯತೆಯ ಸ್ಥಳೀಯ ಸೊಪ್ಪು ಹಾಗೂ ತರಕಾರಿಗಳು, 15 ರೀತಿಯ ಸಿರಿಧಾನ್ಯಗಳ ತಳಿಗಳನ್ನು ಪ್ರದರ್ಶನಕ್ಕಿಟ್ಟಿದ್ದರು. ಒಟ್ಟಾರೆ, ವಸ್ತುಪ್ರದರ್ಶನದಲ್ಲಿ ಸುಮಾರು 340 ಕ್ಕೂ ಹೆಚ್ಚು ಸ್ಥಳೀಯ ಹಾಗೂ ಸಂರಕ್ಷಿತ ತಳಿಯನ್ನು ಪ್ರದರ್ಶಿಸಿ, ಮಾರಾಟಕ್ಕೂ ಅನುವು ಮಾಡಿಕೊಡಲಾಗಿತ್ತು.

ಸಿರಿಧಾನ್ಯಗಳ ಮಾರಾಟ

ಮುಳುಬಾಗಿಲಿನ ಅಕ್ಕಡಿ ಪ್ರಭಾಕರ ವಿವಿಧ ರೀತಿಯ ಸಿರಿಧಾನ್ಯಗಳ ತಳಿಯಾದ ಹಾಲು ಸಾಮೆ, ಕರಿ ಸಾಮೆ, ಹರ ಸಾಮೆ, ಬಿಳಿ ನವಣೆ, ಕೆಂಪು ನವಣೆ, ಕೀರು ನವಣೆ, 70 ದಿನದ ನವಣೆ, ಕೃಷ್ಣದೇವರಾಯ ನವಣೆ, ಉರುವಲು ನವಣೆ, ಹುಲ್ಲು ನವಣೆ, ಬಿಳಿ ಬರಗು, ಕರಿ ಬರುಗು, ಕರಿ ಗಿಡ್ಡ ರಾಗಿ, ಎಂ.ಆರ್ -6 ರಾಗಿ, ಆರು ತಿಂಗಳ ಹಾಕಕ, ಮೂರು ತಿಂಗಳ ಹಾಕಕ, ಐದು ರೀತಿಯ ಬೆಂಡೆ ಬೀಜ, ಸೊಪ್ಪಿನ ಬೀಜ ನೈಸರ್ಗಿಕ ಕೃಷಿಕ ಎಂ.ಸಿ.ರಾಜಣ್ಣತಾವು ಸಂರಕ್ಷಿಸಿದ ಸುಮಾರು 50ಕ್ಕೂ ಹೆಚ್ಚು ಸಸ್ಯ ತಳಿಯನ್ನು ಪ್ರದರ್ಶಿಸಿದರು. ಕನಕಪುರ ತಾಲೂಕಿನ ರಾಜಮ್ಮ ಐದು ರೀತಿಯ ಸೋರೆಕಾಯಿ ತಳಿ, ಆರು ರೀತಿಯ ಹರಳು ಬೀಜದ ತಳಿ, ಮೂರು ರೀತಿಯ ಅವರೆ ತಳಿಗಳು, ದಂಟು ಸೊಪ್ಪಿನ ತಳಿಗಳು, ಇತರೆ ಸೊಪ್ಪಿನ ತಳಿಗಳೂ ಸೇರಿ ಸುಮಾರು 22 ರೀತಿ ಸ್ಥಳೀಯ ತಳಿಗಳನ್ನು ಸಂರಕ್ಷಿಸಿದ್ದರು.

ವಿವಿಧ ಬಗೆಯ ಹಣ್ಣಿನ ಬೀಜ

ಕನಕಪುರ ತಾಲೂಕಿನ ಹಾಪಮ್ಮ ವಿವಿಧ ರೀತಿಯ ಸಿರಿಧಾನ್ಯಗಳು, ಧಾನ್ಯಗಳು, ತರಕಾರಿ ಹಾಗೂ ಹಣ್ಣಿನ ಗಿಡದ ಬೀಜವನ್ನು ಪ್ರದರ್ಶನ ದಲ್ಲಿಟ್ಟಿದ್ದರು. ರಾಮನಗರ ಜಿಲ್ಲೆಯ ತಮ್ಮಯ್ಯ ನಾಟ ಅರಿಶಿಣದ ತಳಿಗಳು, ರಾಗಿ ತಳಿಗಳು (ಕರಿಗಿಡ್ಡ, ಶರಾವತಿ), ಅವರೆ ತಳಿಗಳು, ಗೆಣಸು ಮತ್ತೂ ಆಲೂಗಡ್ಡೆ ತಳಿಗಳು ಹಾಗೂ ಇತರೆ ತರಕಾರಿ ತಳಿಗಳನ್ನು ಸೇರಿದಂತೆ ಸುಮಾರು 30ಕ್ಕೂ ಹೆಚ್ಚು ತಳಿಯನ್ನು ಪ್ರದರ್ಶನಕ್ಕೆ ಇಟ್ಟಿದ್ದರು.



ಹಲಸಿನ ವಿವಿಧ ತಳಿ ಪ್ರದರ್ಶನ

ಕಾರ್ಯಕ್ರಮದ ಆಗಮನಾ ಆಯೋಜಿಸಿದ್ದ ವಸ್ತುಪ್ರದರ್ಶನದಲ್ಲಿ ತೂಬಗೆರೆ ಹೋಬಳಿಯ ಹಲಸು ಬೆಳೆಗಾರರ ಸಂಘದವರ ವಿವಿಧ ಹಲಸು ತಳಿಗಳಾದ ಚಂದ್ರ ಹಲಸು, ಶಿವರಾತ್ರಿ ಹಲಸು, ಏಣಾಡಿ ಹಲಸು, ಸೂರ್ಯ ಹಲಸು, ಸುವರ್ಣ ಹಲಸು, ರುದ್ರಾಕ್ಷಿ ಹಲಸು, ಕೆಂಪು ರುದ್ರಾಕ್ಷಿ ಹಲಸು, ಆಟೋಕ್ ರೆಡ್, ತೂಬಗೆರೆ ಹಲಸು.

Hosadiganta
Pg 08

S-karanataka
Pg 08

ಅಮೆರಿಕದ ಸುಂಕ ಸಮರ
ಭಾರತದ ಅಕ್ಕಿಗೆ ವರದ್ಹಾನ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ಹೇರಿಕೆ ನೀತಿಯು ಭಾರತದ ಅಕ್ಕಿ ರಫ್ತು ವಹಿವಾಟಿಗೆ ಅನುಕೂಲಕರವಾಗಿ ಪರಿಣಮಿಸಿದೆ. ಅಮೆರಿಕ ನೀತಿಯಿಂದ ಕಂಗಾಲಾದ ಮೆಕ್ಸಿಕೋ, ಕೆನಡಾಗಳಿಗೆ ಅಕ್ಕಿ ರಫ್ತು ಮಾಡುವ ಸದಾವಕಾಶ ಲಭಿಸಿದೆ.

ಒಂದು ವೇಳೆ ಭಾರತದ ಅಕ್ಕಿಯ ಮೇಲೆ ಅಮೆರಿಕ ಹೆಚ್ಚಿನ ಆಮದು ಸುಂಕ ಹೇರಿದರೆ ಪರ್ಯಾಯ ಮಾರುಕಟ್ಟೆಯಾಗಿ ಕೆನಡಾ, ಮೆಕ್ಸಿಕೋಗಳಿಗೆ ಕೂಡ ರಫ್ತು ಮಾಡಬಹುದಾಗಿದೆ ಎಂದು ಅಂತಾರಾಷ್ಟ್ರೀಯ ವ್ಯಾಪಾರದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕೆನಡಾ ಮತ್ತು ಮೆಕ್ಸಿಕೋಗಳು ಅಕ್ಕಿ ಸೇರಿದಂತೆ ವಿವಿಧ ಕೃಷಿ ಉತ್ಪನ್ನಗಳನ್ನು ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತವೆ. ಅಮೆರಿಕದಿಂದ ಮೆಕ್ಸಿಕೋಕ್ಕೆ 6,38,000 ಟನ್ ಹಾಗೂ ಕೆನಡಾಕ್ಕೆ 2,50,000 ಟನ್ ಅಕ್ಕಿ ರಫ್ತಾಗುತ್ತಿದೆ. ಇದರ ಮೇಲೆ ಅಮೆರಿಕ ಹೆಚ್ಚಿನ ರಫ್ತು ಸುಂಕ ಹೇರಿದರೆ ಇವೆರಡೂ ದೇಶಗಳಲ್ಲಿ ಅಕ್ಕಿ ದುಬಾರಿಯಾಗಿ ಸಮಸ್ಯೆಯಾಗಲಿದೆ. ಇದೇ ಸಂದರ್ಭದಲ್ಲಿ ಭಾರತದಿಂದ ಅಗ್ಗದ ಅಕ್ಕಿ ರಫ್ತು ಮಾಡುವ ಉತ್ತಮ ಅವಕಾಶ ಲಭಿಸಲಿದೆ.

ಭಾರತದ ಪಾಲು ಶೇ.40

ಭಾರತದ ಬಾಸ್ಮತಿ ಅಕ್ಕಿಯ ಮೇಲೆ ಅಮೆರಿಕ ಆಮದು ಸುಂಕ ಹೇರಿದರೆ ಅಮೆರಿಕ ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿಯುವ ಅಪಾಯವಿಲ್ಲ. ಏಕೆಂದರೆ ಅಮೆರಿಕದಲ್ಲಿ ಸಾಮಾನ್ಯ ಜನರಿಗಿಂತ ಶ್ರೀಮಂತರೇ ಹೆಚ್ಚಾಗಿ ಭಾರತದ



ಬಾಸ್ಮತಿ ಅಕ್ಕಿಯನ್ನು ಬಳಸುತ್ತಾರೆ. ಜಾಗತಿಕ ಅಕ್ಕಿ ಮಾರುಕಟ್ಟೆಯಲ್ಲಿ ಭಾರತ ಮುಂಚೂಣಿಯಲ್ಲಿದ್ದು, ರಫ್ತು 20 ದಶಲಕ್ಷ ಟನ್‌ಗಿಂತಲೂ ಹೆಚ್ಚಳವಾಗಿದೆ. 55–56 ದಶಲಕ್ಷ ಟನ್ ಪ್ರಮಾಣದ ಜಾಗತಿಕ ಅಕ್ಕಿ ವ್ಯಾಪಾರದಲ್ಲಿ ಭಾರತದ ಪಾಲು ಶೇ.40ರಷ್ಟಿದೆ ಎಂದು ಹೇಳಲಾಗಿದೆ. ಅಕ್ಕಿ ಕೇವಲ ಆಹಾರ ಧಾನ್ಯ ಮಾತ್ರವಲ್ಲ, ಅದು ರಫ್ತು ಮಾರುಕಟ್ಟೆಯಲ್ಲಿ ವಾಣಿಜ್ಯ ಸರಕು ಕೂಡ ಹೌದು. ಇದೊಂದು ಅಂಶವೇ ಭಾರತದ ಪಾಲಿಗೆ ವರದಾನವಾಗಿದ್ದು, ಜಾಗತಿಕ ರಫ್ತು ಮಾರುಕಟ್ಟೆಯಲ್ಲಿ ಹೆಚ್ಚಿನ ಪಾಲು ಪಡೆಯಲು ಸಹಾಯಕವಾಗಿದೆ.

70 ದಶಲಕ್ಷ ಟನ್ ಹೆಚ್ಚುವರಿ ದಾಸ್ತಾನು

ಸಾಮಾನ್ಯವಾಗಿ ರಫ್ತು ನಿರ್ಬಂಧ ಗೋಧಿಯ ಮೇಲೆ ಹೆಚ್ಚಾಗಿ ವಿಧಿಸಲಾಗುತ್ತಿದೆಯೇ ಹೊರತು ಅಕ್ಕಿಯ ಮೇಲೆ ಅಲ್ಲ. 2023–24ರಲ್ಲಿ ಅಕ್ಕಿ ಉತ್ಪಾದನೆ 138 ದಶಲಕ್ಷ ಟನ್‌ಗೆ ತಲುಪಿದೆ. ಹೀಗಾಗಿ ಪ್ರಸ್ತುತ ಹತ್ತಿರ ಸುಮಾರು 70 ದಶಲಕ್ಷ ಟನ್ ಹೆಚ್ಚುವರಿ ದಾಸ್ತಾನು ಇದೆ. 2024–25ರಲ್ಲಿ ಉತ್ಪಾದನೆ 150 ದಶಲಕ್ಷ ಟನ್‌ದಷ್ಟಾಗುವದೆಂದು ಅಂದಾಜಿಸಲಾಗಿದೆ. ಆಂತರಿಕ ಬಳಕೆ 90 ದಶಲಕ್ಷ ಟನ್‌ದಷ್ಟಾಗುವ ಸಂಭವ ಇದೆ ಎಂದು ಹೇಳಲಾಗಿದ್ದು, 2030ರ ಹೊತ್ತಿಗೆ ಹೆಚ್ಚುವರಿ ಅಕ್ಕಿ ಸಂಗ್ರಹ 40 ದಶಲಕ್ಷ ಟನ್‌ದಷ್ಟು ವೃದ್ಧಿಯಾಗುವದೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

45.84 ದಶಲಕ್ಷ ಟನ್ ಸಂಗ್ರಹ

2024–25ನೇ ಸಾಲಿನ ಅಕ್ಟೋಬರ್–ಫೆಬ್ರುವರಿ ಅವಧಿಯಲ್ಲಿ ದೇಶಾದ್ಯಂತ 45.84 ದಶಲಕ್ಷ ಟನ್ ಅಕ್ಕಿ ಸಂಗ್ರಹಿಸಲಾಗಿದೆ. ಕಳೆದ ವರ್ಷ ಆಗಿದ್ದ 43.84 ದಶಲಕ್ಷ ಟನ್‌ಗಿಂತ ಶೇ.5ರಷ್ಟು ಹೆಚ್ಚಳವಾಗಿದೆ. ಕಳೆದ ಮುಂಗಾರು ಹಂಗಾಮಿನ ಅಕ್ಕಿ ಉತ್ಪಾದನೆ 119.98 ದಶಲಕ್ಷ ಟನ್‌ದಷ್ಟಾಗುವದೆಂದು ಅಂದಾಜಿಸಲಾಗಿದೆ. ಹೀಗಾಗಿ ಸದ್ಯಕ್ಕೆ ಸಂಗ್ರಹಗೊಂಡ ಪ್ರಮಾಣ ಈಗಾಗಲೇ ಒಟ್ಟು ಉತ್ಪಾದನೆಯ ಶೇ.38ಕ್ಕಿಂತ ಅಧಿಕವಾಗಿದೆ ಎಂದು ತಿಳಿದುಬಂದಿದೆ. ಬಿಸಿಯೂಟ ಸೇರಿದಂತೆ ಸರ್ಕಾರದ ವಿವಿಧ ಯೋಜನೆಗಳಿಗೆ ವಾರ್ಷಿಕವಾಗಿ 41 ದಶಲಕ್ಷ ಟನ್ ಅಕ್ಕಿಯ ಅಗತ್ಯವಿದೆ. ಕೇಂದ್ರ ಸರ್ಕಾರ ಮುಂಗಾರು ಹಂಗಾಮಿಗೆ ಸಂಬಂಧಿಸಿದಂತೆ 49.56 ದಶಲಕ್ಷ ಟನ್ ಅಕ್ಕಿ ಸಂಗ್ರಹಿಸುವ ಗುರಿಯನ್ನು ಹೊಂದಿದೆ. ಇನ್ನು ಹಿಂಗಾರು ಹಂಗಾಮಿನಲ್ಲಿ 7 ದಶಲಕ್ಷ ಟನ್ ಸಂಗ್ರಹದ ಗುರಿ ಇರುವದೆಂದು ಅಂದಾಜಿಸಲಾಗಿದೆ. 2023–24ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಮುಂಗಾರು–ಹಿಂಗಾರು ಎರಡೂ ಸೇರಿದಂತೆ 52.54 ದಶಲಕ್ಷ ಟನ್ ಅಕ್ಕಿ ಸಂಗ್ರಹಿಸಿದೆ.

> ಜಾಗತಿಕ ಅಕ್ಕಿ ಮಾರುಕಟ್ಟೆಯಲ್ಲಿ ಭಾರತ ಮುಂಚೂಣಿಯಲ್ಲಿದ್ದು, ರಫ್ತು 20 ದಶಲಕ್ಷ ಟನ್‌ಗಿಂತಲೂ ಹೆಚ್ಚಳವಾಗಿದೆ. 55–56 ದಶಲಕ್ಷ ಟನ್ ಪ್ರಮಾಣದ ಜಾಗತಿಕ ಅಕ್ಕಿ ವ್ಯಾಪಾರದಲ್ಲಿ ಭಾರತದ ಪಾಲು ಶೇ.40ರಷ್ಟಿದೆ ಎಂದು ಹೇಳಲಾಗಿದೆ. ಅಕ್ಕಿ ಕೇವಲ ಆಹಾರ ಧಾನ್ಯ ಮಾತ್ರವಲ್ಲ, ಅದು ರಫ್ತು ಮಾರುಕಟ್ಟೆಯಲ್ಲಿ ವಾಣಿಜ್ಯ ಸರಕು ಕೂಡ ಹೌದು.

Heat no barrier to bumper wheat production

JITENDRA CHOUBEY @ New Delhi

A bumper wheat crop is expected this year though concerns have been raised over above-normal temperatures that could affect yields in some regions, according to the report of an experts' committee set up by the government. On the back of an expected good wheat yield, the government is hopeful of achieving its public procurement target, which has been missing for the past three years.

Following the India Meteorological Department's prediction of higher-than-normal temperatures in the Northwest region—where 65% of India's wheat is produced—the ministry of agriculture and farmers welfare constituted a team of experts to evaluate crop conditions in key wheat-producing states, including Punjab, Haryana, western Uttar Pradesh, and Rajasthan.

After visiting these states, the committee submitted its findings to the government, concluding that there would be no heatwaves affecting wheat-producing areas and that overall production would be robust. "Our field estimates suggest that wheat production could exceed even the second estimate of 1,154.30 lakh metric tonnes (LMT)," PK Singh, agriculture commissioner, told this newspaper.

Contrary to earlier predictions, he said, no heatwave conditions were reported in the wheat-producing regions. "Early heatwave conditions were primarily observed in Gujarat and other non-wheat-producing regions. We were concerned that this might cause grain shrinkage and reduce production. However, our field visit findings indicate that the maximum temperature in the major wheat-producing Northwest region did not exceed 35 degrees Celsius, and minimum temperatures remained normal. The report concluded that production would be above expectations," Singh added.

The second advanced wheat production estimate puts wheat production at 1154.30 LMT, which is 21.38 LMT higher than the previous year's production of 1132.92 LMT. The area under coverage of wheat stood at 320 lakh hectare in the rabi season of 2024-25 crop year (July-June) as against 315.63 lakh hectare in the preceding year.

Agriculture secretary Devesh Chaturvedi also expected bumper wheat production in 2024-25 on the back of higher sowing areas.

Adverse weather conditions, such as the early arrival of heatwaves in the wheat-producing region, have impacted wheat procurement over the past three years, putting the government on the edge over maintaining food security.


Meanwhile, an industry body's association, PHDCCI, organised an event on agriculture input, at which the issue of spurious pesticides and chemicals was raised. "Based on different research done by international agencies, I can say a parallel spurious pesticide market of $2.5 billion exists which needs to be rein in," claimed Dr RG Agarwal, chairman of the Agribusiness Committee of PHDCCI.

Responding to the issue, Singh said, "There is no formal research conducted on the parallel market of spurious pesticides, though it exists and flourishes but undocumented. State governments need to be proactive to control it." Agrochemical expert Ramendra Singh blamed the spurious market on a nexus of manufacturers and traders who increase sales.

Procurement to get a boost

Wheat production may exceed the second advance estimate of 1,154.30 LMT). Previous year's production was **1132.92 LMT**

Area under wheat coverage stands at 320 lakh hectare in 2024-25 rabi season against **315.63 L ha** last year



IMD predicted higher-than-normal temperatures in the Northwest region where **65%** of India's wheat is produced

After field visits, experts' committee said there would be no heatwaves affecting wheat-producing areas

GOVT IS HOPEFUL OF ACHIEVING ITS PUBLIC PROCUREMENT TARGET, WHICH HAS BEEN MISSING FOR THE PAST THREE YEARS

Ind Exp
Pg 09

Kannada prabha
Pg 09

ಕೃಷಿ ಇಲಾಖೆ

ಜಂಟಿ ಕೃಷಿ ನಿರ್ದೇಶಕರ ಕಛೇರಿ, # 302, 3ನೇ ಮಹಡಿ, ಜಿಲಾಡಳಿತ ಭವನ, ಬಿ.ಎಂ. ರಸ್ತೆ, ರಾಮನಗರ – 562159.
ದೂ. : 080–2727 6780, ಇ–ಮೇಲ್ : jdarmgm@gmail.com

ಸಂಖ್ಯೆ : ಜ.ಕೃ.ನಿ./ರಾ.ನ./ಆತ್ಮ & ಆ.ಪೌ.ಭ./ಗು.ಆ.ಸಿ.ನೇ./2024–25
ದಿನಾಂಕ : 24–03–2025

ಕೃಷಿ ಇಲಾಖೆಯಲ್ಲಿ ಆತ್ಮ ಹಾಗೂ ಆಹಾರ & ಪೌಷ್ಠಿಕ ಭದ್ರತಾ ಯೋಜನೆಯಡಿ ಕೆಲಸ ನಿರ್ವಹಿಸಲು ನೇರ ಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಕಾತಿ ಪ್ರಕಟಣೆ

ಆತ್ಮ ಯೋಜನೆಯಡಿ ಸಹಾಯಕ ತಾಂತ್ರಿಕ ವ್ಯವಸ್ಥಾಪಕರು ಮತ್ತು ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆಗಳಿಗೆ ಹಾಗೂ ಪೌಷ್ಠಿಕ ಆಹಾರ ಮತ್ತು ಭದ್ರತಾ ಯೋಜನೆಯಡಿ ಜಿಲ್ಲಾ ಸಲಹೆಗಾರರ ಹುದ್ದೆಗೆ ಸೀಮಿತ ಅವಧಿಗೆ ನೇರ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಪರಿತ್ತಿಗೆ ಒಳಪಟ್ಟು ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ಹಾಗೂ ಸಂಬಂಧಿಸಿದ ದೃಢೀಕೃತ ದಾಖಲಾತಿಗಳೊಂದಿಗೆ ಜಂಟಿ ಕೃಷಿ ನಿರ್ದೇಶಕರ ಕಛೇರಿ, ರಾಮನಗರ ಇವರಿಗೆ ದಿನಾಂಕ : 02–04–2025 ರೊಳಗಾಗಿ ಸೀಲು ಮಾಡಿದ ಲಕೋಟೆಯಲ್ಲಿ ಮುದ್ರಾಂ / ನೋಂದಾಯಿತ ಅಂಚೆ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು. ಹಾಗೂ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯಲ್ಲಿ ಮಾನದಂಡಗಳನ್ನು ಆಧರಿಸಿ ಆಯ್ಕೆಯನ್ನು ಅಂತಿಮಗೊಳಿಸಲಾಗುವುದು.

ಹುದ್ದೆಗಳ ವಿವರ : 1) ಹುದ್ದೆಯ ಹೆಸರು : ಸಹಾಯಕ ತಾಂತ್ರಿಕ ವ್ಯವಸ್ಥಾಪಕರು, ಹುದ್ದೆಗಳ ಸಂಖ್ಯೆ : 01, ಯೋಜನೆಯ ಹೆಸರು : ಆತ್ಮ ಯೋಜನೆ, ವಿದ್ಯಾರ್ಹತೆ : ಬಿ.ಎಸ್ಸಿ. (ಕೃಷಿ) ಅಥವಾ ಕೃಷಿ ಸಂಬಂಧಿತ ವಿಷಯಗಳಲ್ಲಿ ಪದವಿ, ಅನುಭವ : 01 ವರ್ಷದ ಕೃಷಿ ಕ್ಷೇತ್ರದಲ್ಲಿ ಅನುಭವ ಹೊಂದಿರುವವರಿಗೆ ಆದ್ಯತೆ. 2) ಹುದ್ದೆಯ ಹೆಸರು : ಕಂಪ್ಯೂಟರ್ ಪ್ರೋಗ್ರಾಮರ್, ಹುದ್ದೆಗಳ ಸಂಖ್ಯೆ : 01, ಯೋಜನೆಯ ಹೆಸರು : ಆತ್ಮ ಯೋಜನೆ, ವಿದ್ಯಾರ್ಹತೆ : ಬಿ.ಟೆಕ್ / ಎಂ.ಸಿ.ಎ. / ಪದವಿ ಅಥವಾ ಮಾನ್ಯತೆ ಹೊಂದಿರುವ ಸಂಸ್ಥೆಗಳಲ್ಲಿ ಡಿಪ್ಲೋಮಾ ಇನ್ ಕಂಪ್ಯೂಟರ್ ಅಪ್ಲಿಕೇಷನ್, ಅನುಭವ : ಬಿ.ಟೆಕ್ – 1 ವರ್ಷ, ಎಂ.ಸಿ.ಎ. – 1 ವರ್ಷ ಪದವಿ ಹಾಗೂ ಡಿಪ್ಲೋಮಾ ಇನ್ ಕಂಪ್ಯೂಟರ್ ಅಪ್ಲಿಕೇಷನ್ – 1 ವರ್ಷ. 3) ಹುದ್ದೆಯ ಹೆಸರು : ಜಿಲ್ಲಾ ಸಲಹೆಗಾರರು ಹುದ್ದೆಗಳ ಸಂಖ್ಯೆ : 01, ಯೋಜನೆಯ ಹೆಸರು : ಆಹಾರ ಮತ್ತು ಪೌಷ್ಠಿಕ ಭದ್ರತಾ ಯೋಜನೆ, ವಿದ್ಯಾರ್ಹತೆ : ಎಂ.ಎಸ್ಸಿ ಕೃಷಿ ಅಥವಾ ಕೃಷಿ ಸಂಬಂಧಿತ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ, ಅನುಭವ : 10 ವರ್ಷದ ಕೃಷಿ ಕ್ಷೇತ್ರದಲ್ಲಿ ಅನುಭವ ಹೊಂದಿರುವವರಿಗೆ ಆದ್ಯತೆ.

ಅರ್ಜಿ ಪಡೆಯಬೇಕಾದ ಮತ್ತು ಸಲ್ಲಿಸಬೇಕಾದ ವಿಳಾಸ : ಜಂಟಿ ಕೃಷಿ ನಿರ್ದೇಶಕರ ಕಛೇರಿ, ನಂ. 302, ಕೃಷಿ ಇಲಾಖೆ, 3ನೇ ಮಹಡಿ, ಜಿಲ್ಲಾ ಪಂಚಾಯತ್ ಭವನ, ಬಿ. ಎಂ. ರಸ್ತೆ, ರಾಮನಗರ – 562 159.

ಸಹಿ/– ಜಂಟಿ ಕೃಷಿ ನಿರ್ದೇಶಕರು, ರಾಮನಗರ ಜಿಲ್ಲೆ, ರಾಮನಗರ.

ಡಿಪಿಆರ್/ರಾಮನಗರ/675/ಮಗೆಸಾಲ್/2024–25